**ದಿನಾಂಕಃ 06-01-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎನ್ ಎಸ್ ಬಿ ವಕೀಲರಿಂದಃ**

3. ಈ ಕೇಸಿನಲ್ಲಿ ಸಾಕ್ಷ್ಯವನ್ನು ಎದುರುದಾರ ಕಂಪನಿ ಪರವಾಗಿ ನೀಡಲು ನನಗೆ ಅಧಿಕಾರ ಪತ್ರ ನೀಡಿದ್ದಾರೆ . ನಾನು ಆ ಅಧಿಕಾರ ಪತ್ರವನ್ನು ಈ ಕೇಸಿನಲ್ಲಿ ಹಾಜರುಪಡಿಸಿದ್ದೇನೆ . ನಾನು ಎದುರುದಾರ ಕಂಪನಿಯಲ್ಲಿ ನಿರ್ದೇಶಕ ಅಥವಾ ವ್ಯವಸ್ಥಾಪಕ ನಿರ್ದೇಶಕ ಆಗಿರುವುದಿಲ್ಲ ಆದರೆ ವ್ಯವಸ್ಥಾಪಕ ಆಗಿರುತ್ತೇನೆ . ಅರ್ಜಿದಾರನನ್ನು ಕೆಲಸಕ್ಕೆ ನೇಮಕ ಮಾಡಿಕೊಂಡಾಗ ಅವನನ್ನು ನಮ್ಮ ಕಂಪನಿಯ ಬೇರೆ ರಾಜ್ಯದ ಘಟಕಕ್ಕೆ ವರ್ಗಾವಣೆ ಮಾಡುವ ಯಾವುದೇ ಶರತ್ತು ಇರಲಿಲ್ಲ ಎಂದರೆ ನಮ್ಮ ಕಂಪನಿಯ ನಿಯಮಾವಳಿಯಲ್ಲಿ ಅಂದರೆ ಮೆಮೊರಂಡಂ ಆಫ್ ಆರ್ಟಿಕಲ್ಸ್ ನಲ್ಲಿ ಅದು ಇರುತ್ತದೆ . ಎನ್ ಸಿ ಎಸ್ ಇಂಡಸ್ಟ್ರೀಸ್ ಪ್ರೈವೆಟ್ ಲಿಮಿಟೆಡ್ ಕಂಪನಿಗೂ ನಮ್ಮ ಕಂಪನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ಅರ್ಜಿದಾರ ನಮ್ಮ ಕಂಪನಿ ನೀಡಿದ ವರ್ಗಾವಣೆ ಆದೇಶಕ್ಕೆ ವಿವರಣೆಯನ್ನು ನೀಡಿದ್ದಾರೆ ಎಂದರೆ ವರ್ಗಾವಣೆ ರದ್ದು ಪಡಿಸಬೇಕು ಎಂದು ಮನವಿ ಸಲ್ಲಿಸಿದ್ದಾರೆ . ಅರ್ಜಿದಾರನಿಗೆ ಯಾವುದೇ ದೋಷಾರೋಪಣಾ ಪಟ್ಟಿಯನ್ನು ನಮ್ಮ ಕಂಪನಿ ಜಾರಿ ಮಾಡಿಲ್ಲ ಎಂದರೆ ಹೌದು . ಅರ್ಜಿದಾರನಿಗೆ ಅವನ ಅಹವಾಲನ್ನು ಅವನ ವಿರುದ್ಧ ಕ್ರಮ ಜರುಗಿಸುವ ಬಗ್ಗೆ ಹೇಳಿಕೊಳ್ಳಲು ನೈಸರ್ಗಿಕ ಕಾನೂನಿನ ಅಡಿಯಲ್ಲಿ ಅವಕಾಶ ನೀಡದೇ ಅವನನ್ನು ಸೇವೆಯಿಂದ ವಜಾ ಮಾಡಿದ್ದೇವೆ ಎಂದರೆ ಸುಳ್ಳು . ಅರ್ಜಿದಾರನಿಗೆ ಕಳಂಕ ಬರುವ ರೀತಿ ಅವನನ್ನು ವಜಾ ಮಾಡಿದ ಆದೇಶದಲ್ಲಿ ಹೇಳಿದ್ದೇವೆ ಎಂದರೆ ಸುಳ್ಳು . ಕಾನೂನು ಪ್ರಕಾರ ಕ್ರಮ ಜರುಗಿಸದೇ ಅರ್ಜಿದಾರನನ್ನು ಸೇವೆಯಿಂದ ವಜಾ ಮಾಡಿದ್ದೇವೆ ಎಂದರೆ ಸುಳ್ಳು .

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.

ಸಾಕ್ಷಿಯು ಈ ಹಂತದಲ್ಲಿ ಸ್ವತಃ ಹೇಳಿಕೆ ನೀಡಿದ್ದು ಈ ಕೇಸಿನ ಅರ್ಜಿದಾರ ವರ್ಗಾವಣೆ ರದ್ದತಿಗೆ ಮನವಿ ಸಲ್ಲಿಸಿಲ್ಲ . ಆದರೆ ಇನ್ನೊಂದು ಪ್ರಕರಣದ ಅರ್ಜಿದಾರ ಪೂರ್ಣಾನಂದ ಆ ರೀತಿ ವರ್ಗಾವಣೆ ರದ್ದತಿಗೆ ಅರ್ಜಿ ಸಲ್ಲಿಸಿದ್ದಾನೆ . ಗೊಂದಲ ಮಾಡಿಕೊಂಡು ಈ ಅರ್ಜಿದಾರ ಆ ರೀತಿ ಮನವಿ ಸಲ್ಲಿಸಿದ್ದ ಎಂದು ತಪ್ಪಾಗಿ ಹೇಳಿದ್ದೇನೆ ಎಂದು ಸ್ಪಷ್ಟೀಕರಣ ನೀಡಿದ್ದಾರೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.